ದಿನಾಂಕಃ 18.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾಗರತ್ನಮ್ಮ ನನ್ನ ತಾಯಿ. ನಾವು ಮತ್ತು 1 ರಿಂದ 4 ನೇ ಪ್ರತಿವಾದಿಳ ನಡುವೆ ಒಳ್ಳೆ ಸಂಬಂಧ ಇದೆ ಎಂದರೆ ಸರಿ. ನಾನು ತರಿಕೆರೆಯಲ್ಲಿ ಸುಮಾರು 10 ವರ್ಷಗಳ ಕಾಲ ವಾಸವಿದ್ದೆ. ತರಿಕೆರೆಯು ನಮ್ಮ ಊರಿನಿಂದ ಸುಮಾರು 150 ಕೀಮೀ. ದೂರದಲ್ಲಿರುತ್ತದೆ. ನನ್ನ ತಂದೆಯವರು ನಮ್ಮ ಮನೆಯ ಯಜಮಾನರು ಎಂದರೆ ಸರಿ. ನನ್ನ ತಂದೆಯವರು ನಮ್ಮ ಮನೆಯ ಖರ್ಚು ವ್ಯಚ್ಚಗಳನ್ನು ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಮತ್ತು ಅವರ ಅಣ್ಣತಮ್ಮಂದಿರ ನಡುವೆ ಆಗಿರುವ ವಿಭಾಗದಲ್ಲಿ ನನ್ನ ತಂದೆಗೆ ವಾಸದ ಮನೆ ಬಂದಿಲ್ಲ ಎಂದರೆ ಸರಿ. ಆದಕಾರಣ ಕೆಲವು ದಿನಗಳ ಕಾಲ ನಾವು ನನ್ನ ತಾಯಿಯ ತವರುಮನೆಯಲ್ಲಿ ವಾಸವಿದ್ದೆವು ಎಂದರೆ ಸರಿ. ಅದಾದನಂತರ ನಾವು ಹಳ್ಳಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಇದ್ದೆವು ಎಂದರೆ ಸರಿ. ದಾವಾ ಸ್ವತ್ತಿನ ಸರ್ವೆ ನಂ. ರಲ್ಲಿ 33 ಗುಂಟೆ ಜಮೀನು ನನ್ನ ತಂದೆಯವರು ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನೀರಾವರಿ ಇರಲಿಲ್ಲ ಎಂದರೆ ಸರಿ. ಅದರಲ್ಲಿ ಮಳೆ ಬರಲಿಲ್ಲ ಎಂದರೆ ಬಳೆ ಆಗುತ್ತಿರಲಿಲ್ಲ ಹಾಗೂ  ಬಂಡವಾಳ ಹಾಕಿದರೆ ನಷ್ಟವಾಗುತಿತ್ತು ಎಂದರೆ ಸರಿ. ಆದಕಾಕರಣ ನಮ್ಮ ಕುಟುಂಬಕ್ಕೆ ಆರ್ಥಿಕವಾಗಿ ತೊಂದರೆ ಇತ್ತು ಎಂದರೆ ಸರಿ. ನಾವು ನಮ್ಮ ದೊಡ್ಡಪ್ಪರವರಾದ ಪುಟ್ಟಣ್ಣ ರವರಿಂದ ಕ್ರಯಕ್ಕೆ ಮನೆಯನ್ನು ಪಡೆದುಕೊಂಡೆವು ಎಂದರೆ ಸರಿ. ಸದರಿ ಮನೆಯು ತುಂಬಾ ಹಳೆಯದಾಗಿತ್ತು ಹಾಗೂ ಬೀಳುವ ಪರಿಸ್ತಿತಿಯಲ್ಲಿ ಇತ್ತು ಎಂದರೆ ಸರಿ. ದಾವಾ ಜಮೀನಿನಿಂದ ನಮಗೆ ಯಾವುದೇ ಆದಾಯ ಬರುತ್ತಿರಲ್ಲಿ ಹಾಗೂ ಅಲ್ಲಿ ಜಾಲಿ ಗಿಡಗಳು ಬೆಳದು ನಿಂತಿದ್ದವು ಎಂದರೆ ಸರಿ. 1 ನೇ ಪ್ರತಿವಾದಿಯು ಭೂತಕಾಟನಹಳ್ಳಿಯಲ್ಲಿ ವಾಸವಿದ್ದರು ಹಾಗೂ ಅವರ ಮನೆಗೆ ಅವರೇ ಯಜಮಾನರು ಎಂದರೆ ಸರಿ. ನನ್ನ ತಂದೆಯವರು ಜಮೀನು ಮಾರಾಟ ಮಾಡುವ ಬಗ್ಗೆ ಊರಿನಲ್ಲಿ ಮಾತನಾಡುತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ಸಹ ತಮ್ಮ ಜಮೀನನ್ನು ಮಾರಾಟ ಮಾಡುವುದಾಗಿ ಹೇಳುತಿದ್ದರು ಎಂದರೆ ಸರಿ. ಆದಕಾರಣ ನಮ್ಮ ಕುಟುಂಬದಕ್ಕೆ ಹಣದ ಅವಶ್ಯಕತೆ ಇತ್ತು ಎಂದರೆ ಸರಿ. 5 ನೇ ಪ್ರತಿವಾದಿಯು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಅವರು ನಮ್ಮ ಊರಿನವರು ಎಂದರೆ ಸರಿ. ನನ್ನ ತಂದೆ ಹಾಗೂ 1 ನೇ  ಪ್ರತಿವಾದಿಯು  ದಿಃ08.02.2007 ರಂದು ಸುಮಾರು 56 ಸಾವಿರದ 500 ರೂ. ಗಳಿಗೆ ಮಾರಾಟ ಮಾಡಿದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು  ಮನೆಕಟ್ಟಲು ನನ್ನ ತಂದೆ ಜಮೀನುನ್ನು ಮಾರಾಟ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಜಮೀನನ್ನು ಮಾರಿದಾಗ ನನ್ನ ತಂದೆಯವರು ನಮ್ಮ ಮನೆಯ ಯಜಮಾನರು ಎಂದರೆ ಸರಿ. 5 ನೇ ಪ್ರತಿವಾದಿಯು ಸದರಿ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಾಗ ಜಾಲಿ ಗಿಡಗಳು ಬೆಳೆದಿದ್ದವು ಹಾಗೂ ಅದರಿಂದ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಕುಟುಂಬದ ತಾಪತ್ರಯಕ್ಕಾಗಿ ದಾವಾ ಸ್ವತ್ತನ್ನು ನನ್ನ

ತಂದೆ ಮತ್ತು 1 ನೇ ಪ್ರತಿವಾದಿಯು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ಕ್ರಯಕ್ಕೆ ಪಡೆದುಕೊಂಡಿರುವ ವಿಚಾರ ಎಲ್ಲಾರಿಗೂ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ 5 ನೇ ಪ್ರತಿವಾದಿಯು ಮಾರ್ಕೆಟ್ ಬೆಲಗಿಂತ ಹೆಚ್ಚು ಬೆಲೆಯನ್ನು ನೀಡಿದ್ದರು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಜಾಲಿ ಮರಗಳನ್ನು ತೆಗೆಸಿ ಅಭಿವೃದ್ಧಿ ಮಾಡಿಸಿದರು ಹಾಗೂ ಸದರಿ ಜಮೀನಿನಲ್ಲಿ ಬೋರುಗಳನ್ನು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಕರೆಂಟ್ ವ್ಯವಸ್ಥೆ ಮಾಡಿದ್ದಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ಅಡಿಕೆ ಹಾಗೂ ತೆಂಗಿನ ಗಿಡಗಳನ್ನು ನೆಟ್ಟಿದ್ದಾರೆ ಎಂದರೆ ಸರಿ. ಸದರಿ ಜಮೀನಿನಿಂದ ಹೆಚ್ಚು ಆದಾಯ ಬರುತ್ತಿರುವ ಕಾರಣ ನಾವು ಹಣದ ಆಸೆಗಾಗಿ ನಾವು ಸದರಿ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ನಾವು ಪುಟ್ಟಣ್ಣ ರವರಿಂದ ಪಡೆದ ಮನೆಯನ್ನು ಬೀಳಿಸಿ ಹೊಸ ಮನೆಯನ್ನು ಕಟ್ಟಿಸಿದ್ದೇವೆ ಎಂದರೆ ಸರಿ. 5 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿ ಬಂದಿರುವ ಹಣದಿಂದ ಸದರಿ ಮನೆಯನ್ನು ಕಟ್ಟಿದ್ದೇವೆ ಎಂದರೆ ಸರಿಯಲ್ಲ.

(ಸಾಕ್ಷಿಗೆ ಒಂದು ದೃಡೀಕೃತ ಖಾತಾ extract ಅನ್ನು ತೋರಿಸಲಾಗಿ ಅದು ತಮ್ಮ ಮನೆಗೆ ಸಂಬಂಧಿಸಿದ್ದು ಎಂದು ಸಾಕ್ಷಿಯು ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು.)

ನನ್ನ ತಂದೆಯವರು ಮತ್ತು ನಾವು ಎಲ್ಲಾರೂ ಒಂದೇ ಮನೆಯಲ್ಲಿ ಇದ್ದೆವು ಎಂದರೆ ಸರಿ. ನನ್ನ ತಂದೆಯವರಿಗೆ ಯಾವುದೇ ಕೆಟ್ಟ ಚಟಗಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ನಮ್ಮನ್ನು ಸಾಕಲು ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ಕುಂಟುಂಬದ ಆರ್ಥಿಕ ಪರಿಸ್ಥಿತಿಗಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಿದರು ಎಂದರೆ ಸರಿಯಲ್ಲ. ನನ್ನ ತಂದೆ ಕುಟುಂಬದ ಯಜಮಾನರಾಗಿ ನಮ್ಮಗಳ ಪರವಾಗಿ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿ. ನಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು,
ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.